‘ಈ ಹುಚ್ಚು ನಿನಗೇಕೆ ಅಂಟಿತ್ತು? ಹುಚ್ಚಲ್ಲ ಜ್ಞಾನೋದಯ. ಪ್ರೀತಿ ಬಂಧನವಲ್ಲ ಚೇತನ ಮನಸ್ಸಿನ ಬಿಡುಗಡೆ. ಬದುಕು ಬೆಳಗುವ ನಂದಾದೀಪ ಅದರ ಕಣ್ಣಿಗೆ ಬಡತನ ಸಿರಿತನ. ಜಾತಿಮತ, ಕಾಣದು, ಪ್ರೀತಿ ಪ್ರೀತಿಯನ್ನಷ್ಟೇ ನಿರೀಕ್ಷಿಸುತ್ತದೆ. ಹೊರತು ಬೇರೇನೂ ಅಲ್ಲ. ಹತಾಶನಾದ. ನನಗೆ ನಂಬಿಕೆ ಇಲ್ಲ. ಅದು ಕವಿತೆ, ಗಜಲ, ಕಥೆ, ಕಾದಂಬರಿ, ನಾಟಕ, ಕಲೆ, ಸಿನೆಮಾದಲ್ಲೋ ನೋಡಲು, ಕೇಳಲು, ಓದಲು ಬಲು ಅಂದ. ವಾಸ್ತವ ಬದುಕಿನಲ್ಲಲ್ಲ’.

‘ಏಕೆ ಹಾಗೆ ಮಾತನಾಡುತ್ತೀರಿ?’

‘ಮಾತಲ್ಲ ಸಾಧನಾಜಿ ಎದೆಗೆ ಬಿದ್ದ ಕೆಂಡದುಂಡೆಗಳು ಮಾತಾಡಿಸುತ್ತಿವೆ. ಕೇಳಿ ಒಬ್ಬ ಚಿನ್ನದ ಹುಡುಗನ ಚಿನ್ನದ ಕಥೆ.

ನನ್ನ ಗೆಳೆಯ ಬಡತನದ ಬೆಗೆಯಲ್ಲಿ ಅರಳಿದ ಗುಲಾಬಿ. ಭಾವನಾಜೀವಿ ಆತನ ಕೋಣೆ ಎದುರು ಮನೆಯ ಚಿಂಗಾರಿ ಈತನೊಡನೆ ಕಣ್ಣು ಮುಚ್ಚಾಲೆ ಆಡುತ್ತಾ ಹೃದಯ ಬತ್ತಳಿಕೆಯಿಂದ ಒಲವಿನ ಬಾಣ ಎಸೆಯುತ್ತಿದ್ದಳು. ಅವಳೆಸೆದ ಮಾಯಾ ಬಾಣಕ್ಕೆ ಆತ ಬಲಿಯಾದ. ನಂಬುಗೆಯ ತುಂಬುಗ್ಯೆ ನೀಡಿ ನಿನ್ನನ್ನೆ ಪ್ರೀತಿಸುವೆ, ನಿನ್ನನ್ನೆ ಮದುವೆಯಾಗುತ್ತೇನೆಂದು ವಚನವಿತ್ತಳು. ಬಿಳಿ ಮುಗಿಲಿನಂತಹ ಮಾತುಗಳನ್ನು ಆತ ನಂಬಿದ. ತದನಂತರ ತಂದೆ ತಾಯಿಯರ ಕರುಳಿನ ಮಾತಿಗೆ ಮನ ಸೋತು ಮನಸ್ಸು ಒಬ್ಬನಿಗೆ ನೀಡಿ, ಮಾಂಗಲ್ಯ ಒಬ್ಬನ ಕೈಯಿಂದ ಕಟ್ಟಿಸಿಕೊಂಡಳು. ಅದೇ ಕೊರಗಿನಲ್ಲಿ ಆತ ಕೊರಗಿ ಬೀದಿ ಬಿಕಾರಿಯಾದ’.

ದಟ್ಟವಾದ ಮೌನ ಆವರಿಸಿ ಮಾತಿಗೆ ವಿರಾಮದ ಕೀಲಿ ಬಿತ್ತು. ಸಾಧನಳ ಕೋಮಲವಾದ ಮುಖ ಬಾಡಿ ಕಣ್ಣುಗಳಿಂದ ಹನಿ ನೀರು ಉದುರಿದವು. ನನ್ನ ಪ್ರೀತಿ ಅಲ್ಲಗಳೆದರೆ, ನನಗೆ ಸಾವೇ ಗತಿ. ಮುಜುಗರಕ್ಕೆ ಒಳಗಾಗಿ ಗರ ಬಡೆದವರಂತೆ ನಿಂತ. ಸಾಧನಳ ಪೋಷಕರು ಒಳ ಬಂದರು. ಚಿತ್ರಶಾಲೆಯಂತಿರುವ ಕೋಣೆ ನೋಡಿ ಚಕಿತರಾದರು. ಒಂದೆಡೆ ಕಲಾ ಪರಿಕರಗಳು, ಇನ್ನೊಂದೆಡೆ ಗೌತಮಿಯ ವರ್ಣಚಿತ್ರ ಪರಿಚಯವಿಲ್ಲದವರಂತೆ, ಸಾಧನ ಮನುಜ ಹತ್ತಿರವಿದ್ದೂ ದೂರ ನಿಂತಿದ್ದರು. ತಂದೆ ತಾಯಿಯರ ಮುಖ ನೋಡುತ್ತಲೇ ದುಃಖ ತೀವ್ರವಾಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ‘ಸಾಧನ ಏಕೆ ಅಳುತಿರುವೆ? ನಿನ್ನ ಕಣ್ಣೀರು ನೋಡಲು ನನ್ನ ಮನಸ್ಸಿಗೆ ಆಗದು. ಏನಾಗಿದೆ ಹೇಳವ್ವ?’

ತುಂಬಿ ಬರುವ ದುಃಖ ತಡೆದುಕೊಳ್ಳುತ್ತಾ ಅಳು ನುಂಗಿ ‘ಅಪ್ಪಾ ನಾನು ಮನುಜನನ್ನು ತುಂಬಾ ಪ್ರೀತಿಸುತ್ತೇನೆ’

ಕ್ಷಣ ಕಾಲ ದಿಕ್ಕು ತೋಚದಂತಾಯಿತು. ‘ನಿನ್ನಾಸೆಗಳಿಗೆ ನಾನೆಂದೂ ಭಂಗ ತರುವುದಿಲ್ಲ. ನಿನ್ನಿಷ್ಟವೇ ನನ್ನಿಷ್ಟ. ಇರಲಿ, ಮನುಜನೊಡನೆ ಒಂದು ಮಾತು ಆಡಿ ನೋಡುತ್ತೇನೆ’ ಎಂದರು.

‘ಮನುಜ ಸಾಧನಳ ಪ್ರೀತಿ ಸ್ವೀಕರಿಸುತ್ತಿಯಾ?’ ಮನುಜನ ಕಣ್ಣುಗಳಲ್ಲಿ ಹನಿ ನೀರಾಡಿದವು.

‘ತಬ್ಬಲಿ ಮೇಲೆ ಇಷ್ಟೊಂದು ಪ್ರೇಮಧಾರೆ ಎರೆಯುವ ಅವಳ ನಿಸ್ವಾರ್ಥ ಪ್ರೀತಿಗೆ ನಾನೆಂದು ನೋಯಿಸಲಾರೆ’. ಹೃದಯ ಹೃದಯ ಹಗುರಾಗಿ ಮನಸ್ಸು ಮನಸ್ಸು ಒಂದಾದವು. ಸಾಧನ ಓಡೋಡಿ ಬಂದು ಮನುಜನ ಎದೆಗೆ ಗಟ್ಟಿಯಾಗಿ ಅಪ್ಪಿಕೊಂಡಳು. ■

---

# ಹುಚ್ಚ

■ ಮೂಲ: ಖಲೀಲ್ ಗಿಬ್ರಾನ್

■ ಕನ್ನಡಕ್ಕೆ: ಡಾ.ಎಚ್.ಎಸ್. ಅನುಪಮಾ




ಒಮ್ಮೆ ಹುಚ್ಚರ ಧಾಮದ ಉದ್ಯಾನದಲ್ಲಿ ನಾನಿದ್ದೆ. ಕುತೂಹಲದ ಕಣ್ಣುಗಳ ಸುಂದರ, ಪೇಲವ ಮುಖದ ಒಬ್ಬ ತರುಣ ಅಲ್ಲಿಗೆ ಬಂದ.

ಬೆಂಚಿನ ಮೇಲೆ ನಾನು ಅವನ ಪಕ್ಕ ಕುಳಿತುಕೊಂಡೆ. ‘ನೀನು ಇಲ್ಲೇಕೆ ಇದ್ದೀ?’ ಎಂದು ಕೇಳಿದೆ.

ನನ್ನೆಡೆಗೆ ಆಶ್ಚರ್ಯಚಕಿತನಾಗಿ ನೋಡಿ ಹೇಳಿದ, ‘ಇದೊಂತರ ಊಹಿಸದ ಪ್ರಶ್ನೆಯಾಯಿತಲ್ಲ? ಆದರೂ ಉತ್ತರ ಹೇಳುತ್ತೇನೆ ಕೇಳಿ. ನನ್ನ ತಂದೆಗೆ ನನ್ನನ್ನು ತನ್ನ ಪುನಃಸೃಷ್ಟಿ ಎನ್ನುವಂತೆ ಮಾಡುವ ಹಂಬಲವಿತ್ತು. ನನ್ನ ಚಿಕ್ಕಪ್ಪನಿಗೂ ಅದೇ ಆಸೆಯಿತ್ತು. ನನ್ನಮ್ಮನಿಗಾದರೋ ತನ್ನ ಪ್ರಖ್ಯಾತ ತಂದೆಯ ರೀತಿ ಬೆಳೆಸಲು ಆಸೆಯಿತ್ತು. ನನ್ನ ಅಕ್ಕನಾದರೋ ಕಡಲಲ್ಲಿ ವ್ಯಾಪಾರ ಮಾಡುತ್ತ ತಿರುಗುವ ತನ್ನ ಗಂಡ ನನ್ನ ನಿಖರ ಆದರ್ಶವಾಗಬೇಕೆಂದು ನಂಬಿದ್ದಳು. ನನ್ನಣ್ಣ ನಾನು ಅವನಂತೇ ಒಬ್ಬ ಉತ್ತಮ ಕ್ರೀಡಾಪಟುವಾಗಬೇಕೆಂದು ಬಯಸಿದ್ದ.

ಹಾಗೇ ನನ್ನ ಗುರುಗಳೂ ಸಹ ತತ್ವಶಾಸ್ತ್ರ, ಸಂಗೀತದ ಗುರುಗಳು, ತರ್ಕಶಾಸ್ತ್ರ ಪಂಡಿತರು ಕೂಡಾ ನಾನು ಅವರ ಕನ್ನಡಿಯ ಬಿಂಬದಂತೆ ಆಗಬೇಕೆಂಬ ನಿಶ್ಚಯವನ್ನು ಹೊಂದಿದ್ದರು. ಅದಕ್ಕೇ ನಾನು ಈ ಜಾಗಕ್ಕೆ ಬಂದೆ. ಇದು ವಿವೇಕಯುತ ಸ್ಥಳವಾಗಿ ನನಗೆ ತೋರಿದೆ. ಕೊನೆ ಪಕ್ಷ ಇಲ್ಲಿ ನಾನು ನಾನಾಗಿರಬಹುದು’.

ನಂತರ ಇದ್ದಕ್ಕಿದ್ದಂತೆ ಅವನು ನನ್ನತ್ತ ತಿರುಗಿ ಕೇಳಿದ: ‘ಆದರೆ ಹೇಳು, ನೀನೂ ಕೂಡಾ ಉತ್ತಮ ಶಿಕ್ಷಣ ಮತ್ತು ಬೋಧನೆಯ ಕಾರಣದಿಂದಲೇ ಇಲ್ಲಿಗೆ ಬಂದೆಯೇನು?’

ನಾನು ಉತ್ತರಿಸಿದೆ, ‘ಇಲ್ಲ, ನಾನು ಒಬ್ಬ ಭೇಟಿ ನೀಡುವವ ಅಷ್ಟೇ.’

ಅವನೆಂದ, ‘ಓಹ್, ಹಾಗಾದರೆ ಈ ಗೋಡೆಯಾಚೆಯ ಹುಚ್ಚರ ಧಾಮದಲ್ಲಿ ಬದುಕುತ್ತಿರುವವನೇ ನೀನು?’

(ದಿ ವಾಂಡರರ್)